# ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ, ಶಿವಮೊಗ್ಗ

"ಮಲೆನಾಡ ಸಿರಿ",ಸಾಗರ ರಸ್ತೆ,ಶಿವಮೊಗ್ಗ-577 201

ದೂರವಾಣಿಸಂ:08182-257862 email:madbsecretary@gmail.com

2018-19ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ:13.12.2018 ರ ಸಂಜೆ 5.00 ಗಂಟೆಗೆ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಭಾಂಗಣ, ಕೊಠಡಿ ಸಂ:354 ಸುವರ್ಣ ವಿಧಾನ ಸೌಧ, ಬೆಳಗಾವಿ ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಾಮಾನ್ಯ ಸಭೆಯ ಸಭಾ ನಡವಳಿಗಳು.

****

ಸಭೆಗೆ ಹಾಜರಾದ ಸದಸ್ಯರುಗಳ ಹಾಜರಾತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಪ್ರಥಮವಾಗಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು ಮಲೆನಾಡು ಪ್ರದೇಶ ಅಭೀವೃದ್ಧಿ ಮಂಡಳಿ, ಶಿವಮೊಗ್ಗ ರವರನ್ನು ಹಾಗೂ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಾದ ಶ್ರೀ ಹೆಚ್.ಡಿ. ರೇವಣ್ಣ ರವರನ್ನು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಮುಜುರಾಯಿ ಇಲಾಖೆಯ ಸಚಿವರಾದ ಶ್ರೀ ರಾಜಶೇಖರ ಬಸವರಾಜ ಪಾಟೀಲ್ ರವರನ್ನು ಮತ್ತು ಮಂಡಳಿಯ ಶಾಸಕ ಸದಸ್ಯರುಗಳನ್ನು, ಸರ್ಕಾರದ ಮುಖ್ಯಕಾರ್ಯದರ್ಶಿಗಳನ್ನು, ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಇತರೆ ಎಲ್ಲಾ ಅಧಿಕಾರಿಗಳಿಗೂ ಸ್ವಾಗತ ಕೋರಿ ನಂತರ ಸಭಾ ವಿಷಯಸೂಚಿಯಂತೆ ಸಭೆಯ ಕಲಾಪವನ್ನು ನಡೆಸಿಕೊಡಲು ಮಾನ್ಯ ಅಧ್ಯಕ್ಷರಿಗೆ ಕೋರಿದರು.

ಅದಕ್ಕೆ ಮಾನ್ಯ ಅಧ್ಯಕ್ಷರು ಒಪ್ಪಿಗೆ ಸೂಚಿಸಿದ ನಂತರ, ಮಂಡಳಿಯ ಉಪಕಾರ್ಯದರ್ಶಿಯವರು ದಿನಾಂಕ:29.11.2017 ರಂದು ನಡೆದ ಮಂಡಳಿಯ ಸರ್ವ ಸದಸ್ಯರ ಸಭಾ ನಡವಳಿಗೆ ಮೇಲೆ ತೆಗೆದುಕೊಂಡ ಕ್ರಮವನ್ನು ಸಭೆಗೆ ವಿವರಿಸಿದರು. ಸಭೆಯಲ್ಲಿ ಎಲ್ಲಾ ಸರ್ವ ಸದಸ್ಯರು ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

ಮಂಡಳಿಯ 2017-18ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಅನುಮೋದಿಸುವ ಕುರಿತು.

2017-18ನೇ ಸಾಲಿನ ಮಂಡಳಿಯ ಕಾರ್ಯಕ್ರಮಗಳ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಪ್ರಗತಿ ಹಾಗೂ ಸಿಬ್ಬಂದಿ ಮತ್ತು ವಾರ್ಷಿಕ ಲೆಕ್ಕಪತ್ರಗಳ ವಿವರಗಳನ್ನೊಳಗೊಂಡ ಮಂಡಳಿಯ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಲಾಯಿತು.

**2018–19ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವ ಕುರಿತು 2018–19 ನೇ ಸಾಲಿನ ಮುಂದುವರೆದ ಕಾಮಗಾರಿಗಳ ನವೆಂಬರ್ ಅಂತ್ಯದವರೆಗಿನ ಪ್ರಗತಿ ಪರಿಶೀಲನೆ ಕುರಿತು.**

ಶ್ರೀ ಹೆಚ್.ಡಿ.ರೇವಣ್ಣ, ಮಾನ್ಯ ಲೋಕೋಪಯೋಗಿ ಸಚಿವರು ಇವರು ಮಾತನಾಡುತ್ತಾ ಮಂಡಳಿಯ ಅನುದಾನವನ್ನು ಯಾವ ರೀತಿ ಹಂಚಿಕೆ ಮಾಡಲಾಗುತ್ತಿದೆ ಎಂದು ಹಾಗೂ ಮಂಡಳಿಗೆ ಯಾರ್‍ಯಾರು ಸದಸ್ಯರಾಗಿರುತ್ತಾರೆಂಬುದನ್ನು ಸಭೆಗೆ ತಿಳಿಸಲು ಉಪಕಾರ್ಯದರ್ಶಿಯವರಿಗೆ ಸೂಚಿಸಿದರು.

ಇದಕ್ಕೆ ಮಂಡಳಿಯ ಉಪ ಕಾರ್ಯದರ್ಶಿಯವರು ಮಾತನಾಡುತ್ತಾ ಮಂಡಳಿಯ ವ್ಯಾಪ್ತಿಗೆ ಒಳಪಡುವ 12 ಲೋಕಸಭಾ ಸದಸ್ಯರು, 65 ವಿಧಾನಸಭಾ ಸದಸ್ಯರು, 21 ವಿಧಾನ ಪರಿಷತ್ ಸದಸ್ಯರು, 13 ಜಿಲ್ಲಾ ಪಂಚಾಯತ್ ಅಧ್ಯಕ್ಷರು, 13 ಜಿಲ್ಲೆಯ ಜಿಲ್ಲಾಧಿಕಾರಿಗಳು, ಸರ್ಕಾರದಿಂದ ನಾಮನಿರ್ದೇಶನಗೊಂಡ 10 ನಾಮನಿರ್ದೇಶಿತ ಸದಸ್ಯರು ಹಾಗೂ ಮಂಡಳಿಯ ಕಾರ್ಯದರ್ಶಿಗಳು ಸೇರಿ ಒಟ್ಟು 135 ಸದಸ್ಯರಿರುತ್ತಾರೆ ಎಂದು ವಿವರವನ್ನು ನೀಡಿದರು. ಮುಂದುವರೆದು ಮಾತಾನಾಡುತ್ತಾ

ಸರ್ಕಾರವು ತನ್ನ ಆಯವ್ಯಯದಲ್ಲಿ ಮಂಡಳಿಗೆ ಹಂಚಿಕೆಯಾದ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಮಂಡಳಿಯ ಸರ್ವ ಸದಸ್ಯರ ಸಭೆಯನ್ನು ಕರೆದು ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಗುತ್ತದೆ. ಸಿದ್ಧಪಡಿಸಿದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆ ಪಡೆದ ನಂತರ ಕಾಮಗಾರಿಗಳ ಅನುಷ್ಠಾನ ಕೈಗೊಳ್ಳಲಾಗುತ್ತದೆ ಎಂದು ಸಭೆಗೆ ವಿವರಿಸುತ್ತಾ ಸಾಮಾನ್ಯವಾಗಿ ಈವರೆಗೆ ವಿಧಾನ ಸಭಾ ಸದಸ್ಯರುಗಳಿಗೆ ರೂ.40.00 ಲಕ್ಷದಿಂದ ರೂ.60.00 ಲಕ್ಷದವರೆಗೆ ಅನುದಾನ ನೀಡಲಾಗಿರುವ ವಿಷಯವನ್ನು ತಿಳಿಸಿದರು.

2018–19ನೇ ಸಾಲಿನ ಮುಂದುವರೆದ ಕಾಮಗಾರಿಗಳ ಕ್ರಿಯಾ ಯೋಜನೆಯಡಿ ಅನುಮೋದನೆಯಾಗಿರುವ 1066 ಕಾಮಗಾರಿಗಳಿಗೆ ಒಟ್ಟು ರೂ.66.13 ಕೋಟಿ ಅನುದಾನ ಬೇಕಾಗಿದ್ದು, 2018–19ನೇ ಸಾಲಿನ ಸರ್ಕಾರದ ಆಯವ್ಯಯದಲ್ಲಿ ಮಂಡಳಿಗೆ ರೂ.27.06 ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ದಿನಾಂಕ:01.04.2018 ರ ಆರಂಭಿಕ ಶಿಲ್ಕು ರೂ.25.16 ಕೋಟಿ ಅನುದಾನ ಸೇರಿ ಒಟ್ಟು ರೂ.52.22 ಕೋಟಿ ಅನುದಾನ ಲಭ್ಯವಿರುತ್ತದೆ. 2018–19ನೇ ಸಾಲಿನ ಮುಂದುವರೆದ ಒಟ್ಟು 1066 ಕಾಮಗಾರಿಗಳನ್ನು ಪೂರ್ಣಗೊಳಿಸಲು 15.66 ಕೋಟಿ ಅನುದಾನದ ಕೊರತೆ ಇರುತ್ತದೆ ಎಂದು ಮಂಡಳಿಯ ಉಪಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

2018–19 ನೇ ಸಾಲಿನ ಮುಂದುವರೆದ ಒಟ್ಟು 1066 ಕಾಮಗಾರಿಗಳಲ್ಲಿ 421 ಕಾಮಗಾರಿಗಳು ಪೂರ್ಣಗೊಂಡಿದ್ದು, 381 ಕಾಮಗಾರಿಗಳು ಪ್ರಗತಿಯಲ್ಲಿದ್ದು, 264 ಕಾಮಗಾರಿಗಳನ್ನು ಅನುದಾನದ ಕೊರತೆ ಹಾಗೂ ಶೇ10 ರಷ್ಟು ವಂತಿಗೆ ನೀಡದೇ ಇರುವ ಕಾರಣದಿಂದ ಪ್ರಾರಂಭಿಸಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಮಂಡಳಿಯ ಕುರಿತು ನಾನು ಮುಖ್ಯಮಂತ್ರಿಯಾಗಿ ಹಾಗೂ ಯೋಜನಾ ಇಲಾಖೆಯ ಸಚಿವನಾಗಿ ಪ್ರಥಮವಾಗಿ ಮಂಡಳಿಯ ಸರ್ವ ಸದಸ್ಯರ ಸಭೆಯನ್ನು ನಡೆಸುತ್ತಿದ್ದು ಸಭೆಗೆ ಹಾಜರಾದ ಎಲ್ಲಾ ಸಚಿವರು ಮತ್ತು ಶಾಸಕ ಸದಸ್ಯರುಗಳಿಗೆ ಮತ್ತೊಮ್ಮೆ ಸ್ವಾಗತವನ್ನು ಕೋರುತ್ತೇನೆಂದು

ತಿಳಿಸುತ್ತಾ, ಸದಸ್ಯರನ್ನು ಕುರಿತು ಮಾತನಾಡುತ್ತಾ, ಹಿರಿಯ ಸದಸ್ಯರುಗಳು ಮತ್ತು ಶಾಸಕರುಗಳಿಗೆ ನಿಮ್ಮ ಸಲಹೆ ಮತ್ತು ನಿರೀಕ್ಷೆಗಳನ್ನು ತಿಳಿಸಲು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಮಾನ್ಯ ವಿಧಾನ ಪರಿಷತ್ತು ಸದಸ್ಯರುಗಳಾದ ಶ್ರೀ ಬಸವರಾಜ ಹೊರಟ್ಟಿ, ಶ್ರೀ ಅಯನೂರು ಮಂಜುನಾಥ್ ಮತ್ತು ಶ್ರೀ ಎಂ.ಪಿ.ಸುನೀಲ್ ಸುಬ್ರಮಣ್ಯ ರವರು ನಾವು ಸಹ ವಿಧಾನ ಸಭಾ ಸದಸ್ಯರುಗಳೇ ನಮ್ಮ ಕ್ಷೇತ್ರ ವ್ಯಾಪ್ತಿಯು ಹೆಚ್ಚಿದ್ದು ನಮಗೂ ಸಹ ವಿಧಾನ ಸಭಾ ಸದಸ್ಯರಿಗೆ ನೀಡಿದಂತೆ ಸಮನಾಗಿ ಅನುದಾನ ನೀಡಬೇಕೆಂದು ಒತ್ತಾಯಿಸಿದರು.

ಈ ಕುರಿತು ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಶಾಸಕರು.ಶಿಗ್ಗಾಂವ್ ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ ಪ್ರಸ್ತುತ ಮಂಡಳಿ ವತಿಯಿಂದ ನೀಡಲಾಗುತ್ತಿರುವ ಅನುದಾನವು ಅತೀ ಕಡಿಮೆ ಇದ್ದು, ಇದರಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಆದ್ದರಿಂದ ಪ್ರತೀ ವಿಧಾನ ಸಭಾ ಕ್ಷೇತ್ರಕ್ಕೆ ರೂ.3.00 ಕೋಟಿ ಅನುದಾನವನ್ನು ನೀಡಲು ಸಭೆಯನ್ನು ಕೋರಿದರು.

ಅದೇ ರೀತಿ ಶ್ರೀ ಹರತಾಳು ಹಾಲಪ್ಪ, ಮಾನ್ಯ ಶಾಸಕರು ಇವರು ಸಹ ದನಿಗೂಡಿಸಿದರು. ಮುಂದುವರೆದು ಪ್ರಾರಂಭವಾಗದೇ ಇರುವ ಕಾಮಗಾರಿಗಳ ಕ್ಷೇತ್ರವಾರು ವಿವರವನ್ನು ನೀಡಲು ಸಭೆಗೆ ತಿಳಿಸುತ್ತಾ, ಮಲೆನಾಡು ಪ್ರದೇಶ ವ್ಯಾಪ್ತಿಯಲ್ಲಿ ಶಾಲಾ ಕಟ್ಟಡಗಳು ಮತ್ತು ಅಂಗನವಾಡಿ ಕೇಂದ್ರಗಳು ದುಸ್ಥಿತಿಯಲ್ಲಿದ್ದು, ಅವುಗಳ ಪುನರ್ ನಿರ್ಮಾಣಕ್ಕೆ ಆದ್ಯತೆ ನೀಡಲು ಒತ್ತಾಯಿಸಿದರು.

ಕೆಲವು ಮಾನ್ಯ ಶಾಸಕರುಗಳು ಪ್ರಾರಂಭವಾಗದೇ ಇರುವ ಕಾಮಗಾರಿಗಳ ಅವಶ್ಯಕತೆಗನುಗುಣವಾಗಿ ಪರಿಶೀಲಿಸಿ ಶೇ.10 ವಂತಿಗೆಯನ್ನು ಪಡೆದುಕೊಂಡು ಅನುಷ್ಠಾನ ಮಾಡುವ ವ್ಯವಸ್ಥೆಯನ್ನು ಮಾಡಲು ಮಂಡಳಿಗೆ ತಿಳಿಸಿದರು. ಆದುದರಿಂದ ಮಾನ್ಯ ಸಭಾಧ್ಯಕ್ಷರು ಎಲ್ಲಾ ಕ್ಷೇತ್ರವಾರು ಪ್ರಾರಂಭಿಸಬೇಕಾದ ಕಾಮಗಾರಿಗಳ ವಿವರವನ್ನು ಸಂಬಂಧಪಟ್ಟ ಜನಪ್ರತಿನಿಧಿಗಳಿಗೆ ನೀಡಲು ಸೂಚಿಸಿದರು. ಒಂದು ವೇಳೆ ಶೇ.10% ರಷ್ಟು ವಂತಿಗೆ ಸಂಗ್ರಹಿಸಲು ಸಾದ್ಯವಿಲ್ಲವಾದರೆ ಸದರಿ ಕಾಮಗಾರಿಗಳನ್ನು ಕೈಬಿಡಲಾಗುವುದು.

ಸಭೆಯಲ್ಲಿ ಹಾಜರಿದ್ದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾನ್ಯ ಶಾಸಕರು, ಶಿರಸಿ–ಸಿದ್ಧಾಪುರ ರವರು ಮಾತಾನಾಡುತ್ತಾ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳನ್ನು ಪ್ರತೀ ಕಾಮಗಾರಿಗೂ ಮಂಡಳಿಯಿಂದ ಪರಿವೀಕ್ಷಣೆ ಮಾಡಲು ಹೆಚ್ಚಿನ ಸಮಯ ವ್ಯಯ ಆಗುವುದರಿಂದ ನೇರವಾಗಿ ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಕೋರಿದರು.

ಇದಕ್ಕೆ ಮಂಡಳಿಯ ಕಾರ್ಯಪಾಲಕ ಇಂಜಿನಿಯರ್ ರವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರು ಅನುಷ್ಠಾನಗೊಳಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಸಾರ್ವಜನಿಕರಿಂದ ದೂರುಗಳು ಇದ್ದಲ್ಲಿ ಮಾತ್ರ ಮಂಡಳಿಯಿಂದ ಪರಿಶೀಲಿಸಲಾಗುವುದು ಇಲ್ಲದಿದ್ದರೆ ಅನುಷ್ಠಾನಾಧಿಕಾರಿಗಳು ನೀಡಿದ ಧೃಡೀಕರಣದ ಆಧಾರದ ಮೇಲೆ ನೇರವಾಗಿ ಗುತ್ತಿಗೆದಾರರ ಕ್ಲೈಮುಗಳನ್ನು ಇತ್ಯರ್ಥಪಡಿಸಲಾಗುತ್ತಿದೆ ಹಾಗೂ ಸರ್ಕಾರದ ಆದೇಶದಂತೆ ಕೆ.ಆರ್.ಐ.ಡಿ.ಎಲ್ ಹಾಗೂ ನಿರ್ಮಿತಿ ಕೇಂದ್ರಗಳಿಗೆ ಅಂದಾಜು ಮೊತ್ತದ ಶೇ 40% ರಷ್ಟು ಮೊತ್ತವನ್ನು ಮುಂಗಡ ನೀಡಿ ಉಳಿಕೆ ಮೊತ್ತವನ್ನು ಕಾಮಗಾರಿಯು ಪೂರ್ಣಗೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಬಿಡುಗಡೆ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯರವರು ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೂ ಅವರ ಹೆಸರು ಸದಸ್ಯರ ಪಟ್ಟಿಯಲ್ಲಿ ಇಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದು, ಈ ಸಂಬಂಧ ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ನಿರ್ಣಯಿಸಿದಂತೆ ಸದರಿ ಶಾಸಕರನ್ನು ಮಂಡಳಿಯ ಸದಸ್ಯರನ್ನಾಗಿ ಸೇರಿಸುವ ಕುರಿತಂತೆ ಅಗತ್ಯ ಕ್ರಮವಹಿಸಲು ಯೋಜನಾ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಬೆಳಗಾವಿ ಗ್ರಾಮಾಂತರ ಇವರು ಮಾತನಾಡುತ್ತಾ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಕಾಲುಸಂಕ, ರಸ್ತೆಗಳ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ನೀಡಲು ಕೋರಿದರು. ಈ ವರ್ಷ ಹೆಚ್ಚು ಮಳೆಯಾಗಿದ್ದು ರಸ್ತೆಗಳೆಲ್ಲಾ ಹಾಳಾಗಿರುವುದರಿಂದ ಅನುದಾನದ ಅವಶ್ಯಕತೆ ಇದ್ದು, ಶೀಘ್ರವಾಗಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಬೇಡಿಕೆಯನ್ನಿತ್ತರು.

ಕಾರವಾರ ವಿಧಾನ ಸಭಾ ಕ್ಷೇತ್ರದ ಶ್ರೀಮತಿ ರೂಪಾಲಿ ಸಂತೋಷ್ ನಾಯ್ಕ್ ಯವರು ಸಹ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲು ಹೆಚ್ಚಿನ ಅನುದಾನದ ಅವಶ್ಯಕತೆ ಇರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಬರುವ ಕೊಡಗು ಮತ್ತು ಚಿಕ್ಕಮಗಳೂರು ಪ್ರಸ್ತುತ ಸಾಲಿನಲ್ಲಿ ಅಧಿಕ ಮಳೆಯಿಂದಾಗಿ ಪ್ರವಾಹದಿಂದ ಅಪಾರವಾದ ಆಸ್ತಿ ಹಾನಿಯಾಗುವುದರ ಜೊತೆಗೆ ಕಾಲುಸಂಕ, ರಸ್ತೆಗಳು, ಸಣ್ಣಪುಟ್ಟ ಗ್ರಾಮಗಳು ಕೊಚ್ಚಿ ಹೋಗಿರುವುದನ್ನು ಪ್ರಸ್ತಾಪಿಸುತ್ತಾ, ಅವುಗಳ ಪುನರ್ ನಿರ್ಮಾಣ ಮತ್ತು ಅಭಿವೃದ್ಧಿಪಡಿಸುವಿಕೆಯ ಅಗತ್ಯತೆಯನ್ನು ಸಭೆಗೆ ತಿಳಿಸಿ, ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಲು ಹಾಗೂ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಲು ಸೂಚಿಸಿದರು.

ಮಾನ್ಯ ಸಭಾಧ್ಯಕ್ಷರು ಶ್ರೀ ಕೆ.ಎಸ್.ಈಶ್ವರಪ್ಪನವರು, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಾಸಕರು, ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರ ಇವರಿಗೆ ತಾವು ಹಿರಿಯರಿದ್ದೀರಿ ಈ ಸಭೆಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ತಿಳಿಸಿದರು.

ಶ್ರೀ ಕೆ.ಎಸ್.ಈಶ್ವರಪ್ಪನವರು, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಾಸಕರು, ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರ ಇವರು ಮಾತನಾಡುತ್ತಾ 2018-19ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಲ್ಲಿ ಕೊರತೆಯಿರುವ ರೂ.15.66 ಕೋಟಿ ಬಿಡುಗಡೆಯ ಜೊತೆಗೆ ಪ್ರತಿಯೊಬ್ಬ ಸದಸ್ಯರಿಗೆ ಕನಿಷ್ಠ ರೂ.2.00 ಕೋಟಿ ಅನುದಾನವನ್ನು 2018-19ನೇ ಸಾಲಿನಲ್ಲಿ ನೀಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತಾನಾಡುತ್ತಾ ಮಲೆನಾಡಿನ ಮತ್ತು ಕರಾವಳಿ ವ್ಯಾಪ್ತಿಯ ಎಲ್ಲಾ ಸದಸ್ಯರ ಸಮಸ್ಯೆ ಮತ್ತು ಬೇಡಿಕೆ ಏನಿದೆ ಎಂಬುದನ್ನು ಗಮನಿಸಿದ್ದೇನೆ ಈಗಾಗಲೇ ಅನೇಕ ಇಲಾಖಾ ಯೋಜನೆಗಳಲ್ಲಿ ಗ್ರಾಮೀಣ ಭಾಗದ ಶಾಲಾ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ, ರೈತರಿಗೆ ಒಂದು ಹಳ್ಳಿಯಿಂದ ಮತ್ತೊಂದು

ಹಳ್ಳಿಗೆ ಸಂಪರ್ಕ ಕಲ್ಪಿಸಲು ಅನುಕೂಲವಾಗುವಂತೆ ಕಾಲುಸಂಕ, ತೂಗು ಸೇತುವೆ ಗಳನ್ನು ಆದ್ಯತೆಯ ಮೇಲೆ ನಿರ್ಮಿಸಲು ಸೂಚಿಸಿರುತ್ತೇನೆ. ಅದೇ ರೀತಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಕಾಲುಸಂಕ, ತೂಗು ಸೇತುವೆ ಗಳನ್ನು ನಿರ್ಮಿಸಲು ಸೂಚಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಎಲ್ಲಾ ಸದಸ್ಯರ ಬೇಡಿಕೆಗಳ ಬಗ್ಗೆ ಕುರಿತಂತೆ ಸರ್ಕಾರದ ಮುಖ್ಯಕಾರ್ಯದರ್ಶಿಗಳೊಂದಿಗೆ ಮತ್ತು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರೊಂದಿಗೆ ಚರ್ಚಿಸಿದ್ದೇನೆ. 2018-19ನೇ ಸಾಲಿನಲ್ಲಿ ನಿಗದಿಯಾದ ಅನುದಾನದ ಜೊತೆಗೆ ಕೊರತೆ ಇರುವ ರೂ.15.66 ಕೋಟಿಯನ್ನು ಪರಿಗಣಿಸಿ ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಯಾವುದೇ ರೀತಿಯ ತಾರತಮ್ಯ ಮಾಡದೇ ಸಮನಾಗಿ ಪ್ರತೀ ಒಬ್ಬರಿಗೂ ರೂ.1.00 ಕೋಟಿಯಂತೆ ಅನುದಾನ ನಿಗದಿಪಡಿಸಿ ಉಳಿದ ಮೊತ್ತವನ್ನು ನನ್ನ ವಿವೇಚನೆಯಂತೆ ಹೆಚ್ಚಿನ ಸಮಸ್ಯೆ ಇರುವ ಕಡೆಗಳಲ್ಲಿ ಆದ್ಯತೆ ಮೇರೆಗೆ ವೆಚ್ಚ ಮಾಡಲು ಬಳಕೆ ಮಾಡಲಾಗುವುದು ಎಂದು ತಿಳಿಸುತ್ತಾ, ಒಟ್ಟಾರೆ ರೂ.150.00 ಕೋಟಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದರು. ಈ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ತಿಳಿಸಿದರು.

ಇದಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸಂತೋಷ ವ್ಯಕ್ತಪಡಿಸಿ ಒಪ್ಪಿಗೆ ಸೂಚಿಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಿದರು.

ಶ್ರೀ ಕೆ.ಎಸ್.ಈಶ್ವರಪ್ಪನವರು, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಶಾಸಕರು, ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರ ಇವರು ಮಂಡಳಿಯ ಸದಸ್ಯರ ಅಹವಾಲು ಮತ್ತು ಬೇಡಿಕೆಗಳನ್ನು ಪರಿಗಣಿಸಿ ಸಕರಾತ್ಮಕವಾಗಿ ಸ್ಪಂದಿಸಿರುವುದನ್ನು ಅಭಿನಂದನಾ ಪೂರ್ವಕವಾಗಿ ಎಲ್ಲಾ ಸದಸ್ಯರುಗಳ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಲೋಕೋಪಯೋಗಿ ಸಚಿವರಾದ ಶ್ರೀ ಹೆಚ್.ಡಿ.ರೇವಣ್ಣ ರವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸತಕ್ಕ ಇತರೆ ಯಾವುದೇ ವಿಷಯಗಳು ಇಲ್ಲದೇ ಇದ್ದುದರಿಂದ ಉಪ ಕಾರ್ಯದರ್ಶಿಗಳು ಮಂಡಳಿಯ ಎಲ್ಲಾ ಸದಸ್ಯರಿಗೂ ವಂದನೆಯನ್ನು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ
ಹಾಗೂ ಅಧ್ಯಕ್ಷರು,
ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ,
ಶಿವಮೊಗ್ಗ

# ಅನುಬಂಧ

ದಿನಾಂಕ:13.12.2018 ರ ಸಂಜೆ 5.00 ಗಂಟೆಗೆ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು, ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಭಾಂಗಣ, ಕೊಠಡಿ ಸಂ:354 ಸುವರ್ಣ ವಿಧಾನ ಸೌಧ, ಬೆಳಗಾವಿ ಇಲ್ಲಿ ಜರುಗಿದ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಸಾಮಾನ್ಯ ಸಭೆಗೆ ಹಾಜರಾದ ಸದಸ್ಯರುಗಳ ಪಟ್ಟಿ.

| | | | |
|---|---|---|---|
| | | **ಬೆಳಗಾವಿ ಜಿಲ್ಲೆ** | |
| 1 | ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು | ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು | |
| 2 | ಶ್ರೀ. ಹೆಚ್. ಡಿ. ರೇವಣ್ಣ | ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು | |
| 3 | ಶ್ರೀ. ಉಮೇಶ್ ವಿ.ಕತ್ತಿ | ಹುಕ್ಕೇರಿ | ಮಾನ್ಯ ವಿಧಾನಸಭಾ ಸದಸ್ಯರು |
| 4 | ಶ್ರೀ. ವಿಶ್ವನಾಥ್ ಚಂದ್ರಶೇಖರ್ ಮಾಮನಿ | ಸವದತ್ತಿ ಯಲ್ಲಮ್ಮ | ಮಾನ್ಯ ವಿಧಾನಸಭಾ ಸದಸ್ಯರು |
| 5 | ಶ್ರೀ. ಕೌಜಲಗಿ ಮಹಂತೇಶ್ ಶಿವಾನಂದ | ಬೈಲಹೊಂಗಲ | ಮಾನ್ಯ ವಿಧಾನಸಭಾ ಸದಸ್ಯರು |
| 6 | ಶ್ರೀ. ಲಕ್ಷ್ಮೀ ಹೆಬ್ಬಾಳ್ಕರ್ | ಬೆಳಗಾವಿ (ಗ್ರಾಮೀಣ) | ಮಾನ್ಯ ವಿಧಾನಸಭಾ ಸದಸ್ಯರು |
| | | **ಚಾಮರಾಜನಗರ ಜಿಲ್ಲೆ** | |
| 7 | ಶ್ರೀ. ಆರ್. ನರೇಂದ್ರ | ಹನೂರು | ಮಾನ್ಯ ವಿಧಾನಸಭಾ ಸದಸ್ಯರು |
| 8 | ಶ್ರೀ ಎನ್ ಮಹೇಶ್ | ಕೊಳ್ಳೇಗಾಲ (ಎಸ್.ಸಿ) | ಮಾನ್ಯ ವಿಧಾನಸಭಾ ಸದಸ್ಯರು |
| 9 | ಶ್ರೀ. ಸಿ.ಎಸ್. ನಿರಂಜನ್ ಕುಮಾರ್ | ಗುಂಡ್ಲುಪೇಟೆ | ಮಾನ್ಯ ವಿಧಾನಸಭಾ ಸದಸ್ಯರು |
| | | **ಚಿಕ್ಕಮಗಳೂರು ಜಿಲ್ಲೆ** | |
| 10 | ಶ್ರೀ. ಎಂ.ಪಿ.ಕುಮಾರಸ್ವಾಮಿ | ಮೂಡಿಗೆರೆ (ಎಸ್.ಸಿ) | ಮಾನ್ಯ ವಿಧಾನಸಭಾ ಸದಸ್ಯರು |
| 11 | ಶ್ರೀ ಬೆಳ್ಳಿಪ್ರಕಾಶ್ | ಕಡೂರು | ಮಾನ್ಯ ವಿಧಾನಸಭಾ ಸದಸ್ಯರು |
| 12 | ಶ್ರೀ. ಡಿ.ಎಸ್. ಸುರೇಶ್ | ತರೀಕೆರೆ | ಮಾನ್ಯ ವಿಧಾನಸಭಾ ಸದಸ್ಯರು |
| | | **ಧಾರವಾಡ ಜಿಲ್ಲೆ** | |
| 13 | ಶ್ರೀ. ಅರವಿಂದ ಬೆಲ್ಲದ | ಹುಬ್ಬಳ್ಳಿ ಧಾರವಾಡ (ಪಶ್ಚಿಮ) | ಮಾನ್ಯ ವಿಧಾನಸಭಾ ಸದಸ್ಯರು |
| | | **ಹಾಸನ ಜಿಲ್ಲೆ** | |
| 14 | ಶ್ರೀ. ಪ್ರೀತಮ್ ಜೆ. ಗೌಡ | ಹಾಸನ | ಮಾನ್ಯ ವಿಧಾನಸಭಾ ಸದಸ್ಯರು |
| 15 | ಶ್ರೀ. ಹೆಚ್. ಕೆ. ಕುಮಾರಸ್ವಾಮಿ | ಸಕಲೇಶಪುರ (ಎಸ್.ಸಿ) | ಮಾನ್ಯ ವಿಧಾನಸಭಾ ಸದಸ್ಯರು |
| 16 | ಶ್ರೀ. ಎ.ಟಿ.ರಾಮಸ್ವಾಮಿ | ಅರಕಲಗೂಡು | ಮಾನ್ಯ ವಿಧಾನಸಭಾ ಸದಸ್ಯರು |
| | | **ಹಾವೇರಿ ಜಿಲ್ಲೆ** | |
| 17 | ಶ್ರೀ. ಬಸವರಾಜ್ ಬೊಮ್ಮಾಯಿ | ಶಿಗ್ಗಾಂವ್ | ಮಾನ್ಯ ವಿಧಾನಸಭಾ ಸದಸ್ಯರು |
| 18 | ಶ್ರೀ. ನೆಹರು ಓಲೇಕಾರ್ | ಹಾವೇರಿ (ಎಸ್.ಸಿ) | ಮಾನ್ಯ ವಿಧಾನಸಭಾ ಸದಸ್ಯರು |
| 19 | ಶ್ರೀ. ಬಳ್ಳಾರಿ ವೀರೂಪಾಕ್ಷಪ್ಪ ರುದ್ರಪ್ಪ | ಬ್ಯಾಡಗಿ | ಮಾನ್ಯ ವಿಧಾನಸಭಾ ಸದಸ್ಯರು |

| | | | |
|---|---|---|---|
| | **ಮಂಗಳೂರು ಜಿಲ್ಲೆ** | | |
| 20 | ಶ್ರೀ. ಎಸ್. ಅಂಗಾರ | ಸುಳ್ಯ (ಎಸ್.ಸಿ) | ಮಾನ್ಯ ವಿಧಾನಸಭಾ ಸದಸ್ಯರು |
| 21 | ಶ್ರೀ ಸಂಜೀವ ಮತಾಂದೂರು | ಪುತ್ತೂರು | ಮಾನ್ಯ ವಿಧಾನಸಭಾ ಸದಸ್ಯರು |
| 22 | ಶ್ರೀ. ಉಮನಾಥ ಎ. ಕೋಟ್ಯಾನ್ | ಮೂಡಬಿದ್ರೆ | ಮಾನ್ಯ ವಿಧಾನಸಭಾ ಸದಸ್ಯರು |
| 23 | ಶ್ರೀ. ಹರೀಶ್ ಪೂಂಜ | ಬೆಳ್ತಂಗಡಿ | ಮಾನ್ಯ ವಿಧಾನಸಭಾ ಸದಸ್ಯರು |
| 24 | ಶ್ರೀ. ರಾಜೇಶ್ ನಾಯ್ಕ ಯು | ಬಂಟ್ವಾಳ | ಮಾನ್ಯ ವಿಧಾನಸಭಾ ಸದಸ್ಯರು |
| 25 | ಶ್ರೀ. ವೈ ಭರತ್ ಶೆಟ್ಟಿ | ಮಂಗಳೂರು (ನಗರ ಉತ್ತರ) | ಮಾನ್ಯ ವಿಧಾನಸಭಾ ಸದಸ್ಯರು |
| 26 | ಶ್ರೀ. ಡಿ. ವೇದವ್ಯಾಸ್ ಕಾಮತ್ | ಮಂಗಳೂರು (ನಗರ ದಕ್ಷಿಣ) | ಮಾನ್ಯ ವಿಧಾನಸಭಾ ಸದಸ್ಯರು |
| | **ಮೈಸೂರು ಜಿಲ್ಲೆ** | | |
| 27 | ಶ್ರೀ. ಅನಿಲ್ ಕುಮಾರ್ ಸಿ | ಹೆಚ್.ಡಿ. ಕೋಟೆ (ಎಸ್.ಟಿ) | ಮಾನ್ಯ ವಿಧಾನಸಭಾ ಸದಸ್ಯರು |
| 28 | ಶ್ರೀ. ಅಡಗೂರು ಹೆಚ್. ವಿಶ್ವನಾಥ್ | ಹುಣಸೂರು | ಮಾನ್ಯ ವಿಧಾನಸಭಾ ಸದಸ್ಯರು |
| 29 | ಶ್ರೀ. ಕೆ. ಮಹದೇವ | ಪಿರಿಯಾಪಟ್ಟಣ | ಮಾನ್ಯ ವಿಧಾನಸಭಾ ಸದಸ್ಯರು |
| | **ಶಿವಮೊಗ್ಗ ಜಿಲ್ಲೆ** | | |
| 30 | ಶ್ರೀ. ಕೆ.ಎಸ್. ಈಶ್ವರಪ್ಪ | ಶಿವಮೊಗ್ಗ (ನಗರ) | ಮಾನ್ಯ ವಿಧಾನಸಭಾ ಸದಸ್ಯರು |
| 31 | ಶ್ರೀ. ಎಸ್ ಕುಮಾರ್ ಬಂಗಾರಪ್ಪ | ಸೊರಬ | ಮಾನ್ಯ ವಿಧಾನಸಭಾ ಸದಸ್ಯರು |
| 32 | ಶ್ರೀ. ಅರಗ ಜ್ಞಾನೇಂದ್ರ | ತೀರ್ಥಹಳ್ಳಿ | ಮಾನ್ಯ ವಿಧಾನಸಭಾ ಸದಸ್ಯರು |
| 33 | ಶ್ರೀ. ಹೆಚ್. ಹರತಾಳು ಹಾಲಪ್ಪ | ಸಾಗರ | ಮಾನ್ಯ ವಿಧಾನಸಭಾ ಸದಸ್ಯರು |
| | **ಉಡುಪಿ ಜಿಲ್ಲೆ** | | |
| 34 | ಶ್ರೀ. ಕೆ. ರಘುಪತಿ ಭಟ್ | ಉಡುಪಿ | ಮಾನ್ಯ ವಿಧಾನಸಭಾ ಸದಸ್ಯರು |
| 35 | ಶ್ರೀ. ಬಿ.ಎಂ. ಸುಕುಮಾರ್ ಶೆಟ್ಟಿ | ಬೈಂದೂರು | ಮಾನ್ಯ ವಿಧಾನಸಭಾ ಸದಸ್ಯರು |
| 36 | ಶ್ರೀ. ಲಾಲಾಜಿ ಆರ್ ಮೆಂಡನ್ | ಕಾಪು | ಮಾನ್ಯ ವಿಧಾನಸಭಾ ಸದಸ್ಯರು |
| | **ಉತ್ತರ ಕನ್ನಡ ಜಿಲ್ಲೆ** | | |
| 37 | ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ | ಶಿರಸಿ | ಮಾನ್ಯ ವಿಧಾನಸಭಾ ಸದಸ್ಯರು |
| 38 | ಶ್ರೀಮತಿ ರೂಪಾಲಿ ಸಂತೋಷ ನಾಯ್ಕ | ಕಾರವಾರ | ಮಾನ್ಯ ವಿಧಾನಸಭಾ ಸದಸ್ಯರು |
| 39 | ಶ್ರೀ. ಸುನೀಲ್ ಬಿ ನಾಯ್ಕ | ಭಟ್ಕಳ | ಮಾನ್ಯ ವಿಧಾನಸಭಾ ಸದಸ್ಯರು |
| 40 | ಶ್ರೀ ದಿನಕರ್ ಕೆ. ಶೆಟ್ಟಿ | ಕುಮಟಾ | ಮಾನ್ಯ ವಿಧಾನಸಭಾ ಸದಸ್ಯರು |
| 41 | ಶ್ರೀ. ಅರಬೈಲ್ ಶಿವರಾಮ ಹೆಬ್ಬಾರ್ | ಯಲ್ಲಾಪುರ | ಮಾನ್ಯ ವಿಧಾನಸಭಾ ಸದಸ್ಯರು |
| | **ಮಾನ್ಯ ವಿಧಾನ ಪರಿಷತ್ ಸದಸ್ಯರು** | | |
| 42 | ಶ್ರೀ. ಆಯನೂರು ಮಂಜುನಾಥ. | ನೈರುತ್ಯ ಪದವೀದರ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸಭಾಧ್ಯಕ್ಷರು |
| 43 | ಶ್ರೀ. ಭೋಜೆಗೌಡ | ನೈರುತ್ಯ ಶಿಕ್ಷಕರ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 44 | ಶ್ರೀ. ಕೆ.ಟಿ. ಶ್ರೀಕಂಠೇಗೌಡ | ದಕ್ಷಿಣ ಪದವೀದರ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 45 | ಶ್ರೀ. ಬಸವರಾಜ ಎಸ್. ಹೊರಟ್ಟಿ | ಪಶ್ಚಿಮ ಶಿಕ್ಷಕರ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 46 | ಶ್ರೀ. ಮರಿತಿಬ್ಬೇಗೌಡ | ದಕ್ಷಿಣ ಶಿಕ್ಷಕರ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 47 | ಶ್ರೀ ಆರ್. ಪ್ರಸನ್ನ ಕುಮಾರ್ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 48 | ಶ್ರೀ ಆರ್ ಧರ್ಮಸೇನ್ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 49 | ಶ್ರೀ ಮಹಂತೇಶ್ ಎಂ ಕವಟಗಿಮಠ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |

| | | | |
|---|---|---|---|
| | ಶ್ರೀ ವಿವೇಕ್ ರಾವ್ ಪಾಟೀಲ್ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 51 | ಶ್ರೀ ಎಂ.ಪಿ. ಸುನಿಲ್ ಸುಬ್ರಮಣಿ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 52 | ಶ್ರೀ ಎಂ.ಕೆ. ಪ್ರಾಣೇಶ್ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 53 | ಶ್ರೀ ಶ್ರೀಕಾಂತ್ .ಎಲ್ ಗೂಟ್ಗೇಕರ್ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 54 | ಶ್ರೀ ಗೋಪಾಲ ಸ್ವಾಮಿ | ಸ್ಥಳೀಯ ಸಂಸ್ಥೆಗಳ ಕ್ಷೇತ್ರ | ಮಾನ್ಯ ವಿಧಾನ ಪರಿಷತ್ ಸದಸ್ಯರು |
| 55 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | |